# ಅಸ್ಪೃಶ್ಯರು: ಆಧುನಿಕ ಸಂವೇದನೆಯಲ್ಲಿನ ಬಿಕ್ಕಟ್ಟು

**ಸೌಮ್ಯ ವಿ.***

**DOI: https://doi.org/10.5281/zenodo.20106726**

**ABSTRACT**

ಕಾಲಘಟ್ಟಗಳು, ಚಿಂತನೆಗಳು, ಬದುಕಿನ ಕುರಿತಾದಂತ ಗ್ರಹಿಕೆಗಳು ಬದಲಾದಂತೆ ಜೀವನ ವಿಧಾನವೂ ಬದಲಾವಣೆಗೊಳ್ಳುತ್ತದೆ. ಭಾರತವು ಸ್ವಾತಂತ್ರ್ಯವನ್ನು ಪಡೆದಂದಿನಿಂದ ಇಂದಿನವರೆವಿಗೂ ಇಂತಹ ಹಲವು ಗ್ರಹಿಕೆಗಳಿಗೆ ಬದುಕು ಮುಖಾಮುಖಿಗೊಂಡಿದೆ. ಅನೇಕ ಚಿಂತನೆ, ಗ್ರಹಿಕೆ ಹಾಗೂ ಅನ್ವೇಷಣೆಗೆ ಒಳಗಾದ ಬದುಕಿನ ಕುರಿತಾದ ಕುತೂಹಲದೊಂದಿಗೆ 'ವೈದೇಹಿಯವರ – ಅಸ್ಪೃಶ್ಯರು' ಕಾದಂಬರಿಯನ್ನು ವಿಶ್ಲೇಷಿಸಲಾಗುವುದು.

**KEYWORDS**: ಆಧುನಿಕತೆ, ವೈರುಧ್ಯತೆ, ಜಾತಿ ವ್ಯವಸ್ಥೆ, ತಲೆಮಾರುಗಳ ಘರ್ಷಣೆ, ಜೀವನ ಕ್ರಮ.

ತೊಂಬತ್ತರ ದಶಕದಲ್ಲಿ ವಸಾಹತು ಕಾಲಘಟ್ಟದ ಬದಲಾವಣೆಯ ಛಾಯೆಗಳು ಆಧುನಿಕತೆಯ ಹಿನ್ನೆಲೆಯಲ್ಲಿ ರೂಪ ತಳೆದವು. ನಾಗರಿಕತೆಯೆಂದರೆ ಪೌರ್ವಾತ್ಯ ರಾಷ್ಟ್ರಗಳ ಪಾಶ್ಚಿಮಾತ್ಯರ ಅನುಕರಣೆ ಎಂದೇ ಗ್ರಹಿಕೆಗೆ ಒಳಪಟ್ಟಿತು. ಬ್ರಿಟಿಷರ ಆಲೋಚನೆಗಳನ್ನು ಅನುಸರಿಸುವವರು ನಾಗರಿಕರೆಂತಲೂ, ಉಳಿದವರು ಅನಾಗರಿಕರೆಂತಲೂ ತಿಳಿಯಲಾಯಿತು. ಆದರೆ, ಭಾರತೀಯ ನೆಲೆಯಲ್ಲಿ ಈ ನಾಗರಿಕತೆಯ ವ್ಯಾಖ್ಯಾನಗಳು ಸಾಪೇಕ್ಷಗೊಳ್ಳಲು ಸಾಧ್ಯವಾಗಲಿಲ್ಲ. ಅಥವಾ ಈ ನಾಗರಿಕತೆಯ ವ್ಯಾಖ್ಯಾನಗಳು ಸಾಂಸ್ಕೃತಿಕ ಪ್ರಕ್ರಿಯೆಯಲ್ಲಿ ರೂಪಾಂತರಗೊಂಡಿರಬಹುದೆಂದು ಗ್ರಹಿಸಬಹುದು.

'ಅಸ್ಪೃಶ್ಯರು' ವೈದೇಹಿಯವರ ಈ ಕಾದಂಬರಿಯು ವೈದೇಹಿಯವರೇ ಹೇಳುವಂತೆ 'ಅಸ್ಪೃಶ್ಯರು' ಅಂದರೆ, 'ಮುಟ್ಟಬಾರದ' ಎಂಬುದು ರೂಢಿಗತ ಅರ್ಥ;

* **ಸೌಮ್ಯ ವಿ.,** ಸಹಾಯಕ ಪ್ರಾಧ್ಯಾಪಕರು, ಬಿ.ಎಂ.ಎಸ್. ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಬೆಂಗಳೂರು.

'ಮುಟ್ಟಲಾಗದ' ಎಂದೂ ಸಹ ಅದನ್ನು ಅರ್ಥೈಸಬಹುದು. ಈ ಕಾದಂಬರಿ ಜಾತಿಜಾತಿಗಳ ಅಸ್ಪೃಶ್ಯತೆಯ ಜೊತೆಗೆ, ಒಂದೇ ಸಮುದಾಯದ ಒಂದೇ ಕುಟುಂಬದೊಳಗಿನ ಹಲವಾರು ಅಸ್ಪೃಶ್ಯತೆಯ ಸ್ತರಗಳನ್ನು ಅನಾವರಣಗೊಳಿಸುತ್ತದೆ. ಅಲ್ಲದೆ, ಈ ಕಾದಂಬರಿಯು ಆಧುನಿಕತೆ, ಹಿಂದಿನ ಹಾಗೂ ಇಂದಿನ ತಲೆಮಾರುಗಳ ಘರ್ಷಣೆ, ಬದಲಾವಣೆಯ ಮಿತಿಗಳು, ಸ್ತ್ರೀಸಂವೇದನೆ, ಜಾತಿ ವ್ಯವಸ್ಥೆ – ಮನೆಯ ಒಳಗೆ ಹಾಗೂ ಮನೆಯ ಹೊರಗೆ, ಗ್ರಾಮ ಹಾಗೂ ನಗರದ ವೈರುಧ್ಯತೆ, ತಳ ಸಮುದಾಯದ ಶೋಷಣೆ ಹಾಗೂ ಪ್ರತಿಭಟನೆಯನ್ನೂ ಒಳಗೊಂಡಿದೆ.

ಅಸ್ಪೃಶ್ಯರು– ಕಾದಂಬರಿಯು ಮೂರು ತಲೆಮಾರುಗಳ ಕಥೆ. ಹೀಗೆ ಮೂರು ತಲೆಮಾರು ಎಂದು ಗುರುತಿಸುವಾಗ ಆಧುನಿಕ ಬದುಕಿನ ವಿಚಾರಗಳಿಗೆ ವಿಮುಖವಾಗಿರುವ, ಆಧುನಿಕತೆಗೆ ತೆರೆದುಕೊಂಡಿರುವ ಹಾಗೂ ಈ ಎರಡು ಮಾದರಿಗಳ ಅರಿವಿದ್ದು ತಟಸ್ಥವಾಗಿರುವ ಆಲೋಚನೆಯನ್ನುಳ್ಳವರೆಂದು ಗುರುತಿಸಬಹುದು.

ಕುಟುಂಬದಲ್ಲಿನ ಹೆಣ್ಣು ಪರಂಪರೆಯಿಂದ ಬಿಡಿಸಿಕೊಳ್ಳುವ ಪ್ರಜ್ಞೆಯನ್ನು ಹೊಂದಿದ್ದಲ್ಲಿ ಬದಲಾವಣೆ ಸಾಧ್ಯವಾಗುತ್ತದೆ. ಹೆಣ್ಣು ಇಲ್ಲಿ ಕೇಂದ್ರದಲ್ಲಿ ಇರುವಳೆಂದು ಅರ್ಥವಲ್ಲ ಆಕೆ ಅರಿವಿನಿಂದ ವಂಚಿತಳಾದವಳೆಂದು ಗುರುತಿಸಬಹುದು. ಕಥೆಯಲ್ಲಿ ಗೌರಮ್ಮ, ಪಾರ್ತಕ್ಕ ಹಾಗೂ ರತ್ನಾಳನ್ನು ಈ ದೆಸೆಯಲ್ಲಿ ಆಧುನಿಕತೆಗೆ ವಿಮುಖರೆಂದೇ ಹೇಳಬಹುದು. ಗೌರಮ್ಮ ತನ್ನ ಕೆಲಸಗಳಿಗೆ ಪಾರ್ತಕ್ಕ ಒದಗುತ್ತಾಳೆ ಎಂಬ ಕಾರಣ ಮಾತ್ರದಿಂದಲೇ ಆಕೆಯನ್ನು ತನ್ನ ಮನೆಯಲ್ಲಿ ಸಹಿಸುತ್ತಿದ್ದಾಳೆ. ಆಕೆಗೆ ಮದುವೆಯಾಗದ ತನ್ನಿತರ ಮಕ್ಕಳಿಗೆ ಪಾರ್ತಕ್ಕ ತನ್ನ ಮನೆಯಲ್ಲಿರುವುದರಿಂದ ಅನಾನುಕೂಲವಾದೀತೆಂಬ ಯೋಚನೆಯಿದೆ. ಪಾರ್ತಕ್ಕ ಮಗ ಭಾಸ್ಕರನ ದೆಸೆಯಿಂದ ತಾನು ಸಮಾಜದಲ್ಲಿ ತಿರಸ್ಕೃತಳಾದೆನೆಂಬ ಮನಸ್ಥಿತಿಯಲ್ಲಿಯೇ ಬದುಕನ್ನು ದೂಡುತ್ತಿದ್ದಾಳೆ. ಜಾತಿಯನ್ನು ತೊರೆದು ಮದುವೆಯಾದ ಮಗನು ತನ್ನ ಅಸ್ತಿತ್ವವನ್ನೇ ನೆಲಸಮ ಮಾಡಿದಂತೆ ಭಾವಿಸುತ್ತಾಳೆ. ರತ್ನಾ ತನ್ನ ಪತಿಯಿಂದ ವಿವಿಧ ರೀತಿಯಲ್ಲಿ ಶೋಷಣೆಗೆ ಒಳಗಾದಾಗ್ಯೂ, ಅದರ ವಿರುದ್ಧವಾಗಿ ಉಸಿರೆತ್ತದೇ ಇರುವುದು, ಹೆಂಡತಿಯಾದವಳು ಹೀಗೆಯೇ ಬದುಕಬೇಕೆಂಬ ಪ್ರಜ್ಞೆಯನ್ನು ಹೊಂದಿದವಳಾಗಿ ಕಾಣುತ್ತಾಳೆ. ಸರೋಜಳಲ್ಲಿನ ಬದುಕಿನ ಭಿನ್ನ ದೃಷ್ಟಿ ರತ್ನಾಳಲ್ಲಿ ಇಲ್ಲವಾಗಿದೆ. ಆಧುನಿಕತೆಯ ಗ್ರಹಿಕೆಗೆ ಸಿದ್ಧರಿರದ ಪಾತ್ರಗಳನ್ನು ಕಾಣಬಹುದು.

ಕುಮುದಿನಿ ಅಂತರ್ಜಾತೀಯ ವಿವಾಹದಲ್ಲಿದ್ದು ಬದಲಾದ ಆಧುನಿಕ ಮಹಿಳೆಯ ಪ್ರತೀಕವಾಗಿ ಕಾಣುತ್ತಾಳೆ. ಈ ಬದಲಾವಣೆಯ ಸ್ವರೂಪವನ್ನು ಗಮನಿಸಿದರೆ, ಆಕೆ ತನ್ನ ಜನ್ಮದಿಂದ ಬಂದ ಸಂಪ್ರದಾಯ, ಆಚರಣೆ ಹಾಗೂ ಬದುಕಿನ ರೀತಿ ನೀತಿಗಳನ್ನು ತೊರೆದು ಸಮಾಜದಲ್ಲಿನ ಮೇಲ್‌ಸ್ತರದ ಆಚರಣೆಗಳಿಗೆ ಒಳಗಾಗುತ್ತಾಳೆ. ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಬದಲಾವಣೆಗೆ ಒಳಗಾಗುವುದು ಗಂಡಿನ ಆಶಯಗಳಿಗೆ ಅನುಗುಣವಾಗಿ, ಅವನ ಸಾಧನೆಯ ಭಾಗವಾಗಿ. ಹಾಗೂ

ಭಾಸ್ಕರನ ಆದರ್ಶತ್ವವನ್ನು ಖಚಿತಪಡಿಸುವ ಬಗೆಯಲ್ಲಿ 'ಕುಮುದಿನಿ' ಇಲ್ಲಿ ಕಾಣಿಸುತ್ತಾಳೆ. ಓದಿದವಳಾಗಿಯೂ ಆಧುನಿಕತೆಯನ್ನು ಭಾಸ್ಕರನ ಕಣ್ಣುಗಳಿಂದ ನೋಡಲಷ್ಟೇ ಆಕೆ ಸಮರ್ಥಳು.

ಪಾರ್ತಕ್ಕನ ಹಾಗೂ ಗೌರಮ್ಮನ ವಿಚಾರಗಳು ಒಂದೇ ನೆಲೆಯವು. ಹಿಂದಿನಿಂದ ಬಂದಂತಹ ಸಂಪ್ರದಾಯಗಳನ್ನು ಮೀರದಂತವು. ಇವರ ಛಾಯೆಯಲ್ಲಿಯೇ ಬೆಳೆದ ರತ್ನಾಳಿಗೆ ತನ್ನ ಗಂಡನಿಂದಾಗುವ ಶೋಷಣೆಗಳೂ ಸಹ ಸಹಜವಾದುದೆಂದೇ ಭಾವಿಸಿರುತ್ತಾಳೆ. ಅವಳ ದುಃಖವೂ ಎಲ್ಲರಿಗಿರುವಂತಹದ್ದೇ ಆದ್ದರಿಂದ ಅವಳಿಗೆ ಅದು ಜೀವನ ಕ್ರಮವೇ ಸರಿ. ಸರೋಜ ರತ್ನಳ ಬದುಕಿನ ಕುರಿತು ಮರುಗುತ್ತಾಳೆ. ಆದರೆ ಈ ಪ್ರಜ್ಞೆಯಿಂದ ರತ್ನಾ ವಂಚಿತಳಾಗಿದ್ದಾಳೆ. ಅವಳಿಗೆ ತನ್ನ ತವರು ಮನೆಯವರು ತನ್ನ ಗಂಡ ಹೇಳಿದಂತೆಯೇ ನಡೆಯಬೇಕೆಂಬ ಅಭಿಲಾಷೆಯದು. ತವರು ಮನೆಯಲ್ಲಿನ ಗಂಡನ ಗಾಂಭೀರ್ಯ ಮನೆಯವರೆಲ್ಲರಿಗೂ ಮೆಚ್ಚಿನದ್ದೇ ಆಗಿ ಹಿರಿದಾಗುತ್ತಾಳೆ. ಆಧುನಿಕತೆ ಹಾಗೂ ಬದಲಾವಣೆಗಳ ಛಾಯೆಗಳನ್ನೂ ಕಾಣಲಿಚ್ಛಿಸದ ಅನೇಕ ತಲೆಮಾರುಗಳು ನಮ್ಮ ನಡುವೆ ಇಂದಿಗೂ ಇವೆ. ಈ ಮಾದರಿಯ ಮನಸ್ಥಿತಿಗಳು ಪ್ರಾದೇಶಿಕ ವ್ಯವಸ್ಥೆಯ ಪಳೆಯುಳಿಕೆಗಳಾಗಿ ಉಳಿದುಕೊಂಡೇ ಇರುತ್ತವೇನೋ?.

ಈ ಕಾದಂಬರಿಯಲ್ಲಿ ಶಿಕ್ಷಣವನ್ನು ಪಡೆದವರು ಬದಲಾವಣೆಯ ರುವಾರಿಗಳಂತೆ ಕಾಣುತ್ತಾರೆ. ಆದರೆ, ಪರಂಪರೆಯಿಂದ ಕಳಚಿಕೊಂಡು, ಮೌಲ್ಯಗಳನ್ನು ಕಂಡುಕೊಳ್ಳಲಾಗದ ಅತೃಪ್ತ ಸ್ಥಿತಿ ಇವರದು. ವಾಸುದೇವರಾಯರು ಭಾಸ್ಕರನಲ್ಲಿ ತಮ್ಮ ಅತೃಪ್ತ ಮೌಲ್ಯಗಳಿಗೆ ಸಮಾಧಾನವನ್ನು ಕಂಡುಕೊಳ್ಳುತ್ತಾರೆ. ಹಾಗಾಗಿ ಭಾಸ್ಕರನಲ್ಲಿ ವಾಸುದೇವರಾಯರು ತಮ್ಮ ಬದುಕಿನ ಸಾರ್ಥಕತೆಯನ್ನು ಹೊಂದುತ್ತಾರೆ. ಕುಮುದಿನಿ ಬ್ರಾಹ್ಮಣರ ಅಡುಗೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದಿರುವುದನ್ನು ಕಂಡು ವಾಸುದೇವರಾಯರು ಆಶ್ಚರ್ಯ ಪಡುವರು. ಆಗ ಭಾಸ್ಕರ "ಅಡುಗೆಗೇನು ಮಾವಯ್ಯಾ? ಸ್ವಲ್ಪ ದಿನ ಹೋಗಲಿ. ಒಂದು ಕಂಪ್ಯೂಟರ್ ಕೈಯಿಂದಲೂ ಅಪ್ಪಟ ಕೋಟದಡುಗೆಯನ್ನು ಮಾಡಿಸಲು ಬಂದೀತು. ಆಗ ನೀವು ಅದಕ್ಕೆ ಕೋಟ ಬ್ರಾಹ್ಮಣ ಕಂಪ್ಯೂಟರ್ ಎಂದು ಹೇಳಿ ಜಾತಿ ಕೊಟ್ಟು ಬಿಡುತ್ತೀರಾ?" ಎಂದನು. ಉಡುಗೆ, ತೊಡುಗೆ ಹಾಗೂ ಬಹಳ ಮುಖ್ಯವಾಗಿ ಆಹಾರ ಪದ್ಧತಿಯ ಜಾತಿ ಪ್ರತಿಷ್ಠೆಯ ಪ್ರಜ್ಞೆಯ ಗ್ರಹಿಕೆ ಭಾಸ್ಕರನಲ್ಲಿದೆ. ಕಾದಂಬರಿಯಲ್ಲಿ ಎಲ್ಲಿಯೂ ಕುಮುದಿನಿಯ ಆಹಾರದ ಆಯ್ಕೆಗಳ ಚರ್ಚೆ ಇಲ್ಲ. ಅವನಲ್ಲಿ ಬದಲಾಗುತ್ತಿರುವ ಕಾಲದ ಕುರಿತು ಅರಿವಿದೆ. ಅಂದು ನಾರದನು ತಿಳಿಸಿದ ರಾಮಾಯಣವನ್ನು ಬರೆದ ವಾಲ್ಮೀಕಿ ಒಬ್ಬ ಬೇಡ. ಅವನ ರಾಮಾಯಣವನ್ನು ಸಮಾಜ ಒಪ್ಪಿತು, ಆದರೆ ಇಂದು ಈಗಿನ ಈ ಸಮಾಜ ಯಾವಾಗ ಹೇಗೆ ಬದಲಾಯಿತೋ ತಿಳಿಯದು. ಸಾಮಾಜಿಕ ವ್ಯವಸ್ಥೆ ಬದಲಾಗಬಹುದೆಂಬ ಆಶಾಭಾವವು ಭಾಸ್ಕರನಲ್ಲಿ ಕಾಣುತ್ತದೆ. ಆದರೆ, ಸಾಮಾಜಿಕ ವ್ಯವಸ್ಥೆಯಲ್ಲಿ ನಂಬಿಕೆಯುಳ್ಳ ಭಾಸ್ಕರ ಕುಮುದಿನಿಯನ್ನು ತನಗೆ ಬೇಕಾದಂತೆ ಬದಲಾಯಿಸಿಕೊಂಡಂತೆ ಕಾಣುತ್ತದೆ. ಕುಮುದಿನಿಯ ಆಹಾರದ ಆಯ್ಕೆಯ ಕುರಿತು

ಅವನದು ಪ್ರಜ್ಞಾಪೂರ್ವಕ ಅವಜ್ಞೆಯೇ?. ಇದು ಹೆಣ್ಣಿನ ಸ್ವಾತಂತ್ರ್ಯದ ಕುರಿತು ಚಿಂತಕರ ನಿರ್ಲಕ್ಷ್ಯವನ್ನು ಪ್ರತಿನಿಧಿಸುತ್ತದೆ.

ಸರೋಜ, ಶೀನ ಇಬ್ಬರು ಬದಲಾದ ಕಾಲದ ಅರಿವಿದ್ದವರಾದರೂ ತಾವು ಪರಂಪರೆಯ ಎಲ್ಲೆಯನ್ನು ಮೀರುವರೆಂಬ ಬಗೆಗೆ ಅತ್ಯಂತ ಸಂಶಯವನ್ನು ಹೊಂದಿದವರು. ಆದರೆ, ಬದಲಾವಣೆಯ ಕ್ರಿಯೆಯಲ್ಲಿ ತೊಡಗಿದವರ ಕುರಿತು ಹೆಮ್ಮೆ ಪಡುವವರು. ಕ್ರಿಯೆಯಲ್ಲಿರದ ಆದರ್ಶಗಳೂ ಬದಲಾವಣೆಯನ್ನು ತರಲು ಹೇಗೆ ಸಾಧುವಾದವು?. ನರಪಟೆಯ ಬಳಗ ನಾಮಕರಣದ ಎಂಜಲ ಎಲೆಯ ಊಟವನ್ನು ಸವಿಯುವಾಗ ಪುಟ್ಟುವಿಗೆ ಅಸಹ್ಯವಾಗುತ್ತದೆ. ನಮಗೆ ಪಾರ್ತಕ್ಕ ಎಂಜಲು ತಿನ್ನಬಾರದು ಎನ್ನುತ್ತಾರಲ್ಲವೆಂದು. ಪುಟ್ಟು ಇದೇ ವಿಚಾರವನ್ನು ಗೆಳೆಯರ ಬಳಿ ತಿಳಿಸಿದಾಗ, ನಮ್ಮ ಮನೆಯಲ್ಲೂ ನರಪಟೆಯವರು ಹೀಗೇ ಎಂಜಲ ಎಲೆ ತಿಂದರು ಎಂದಾಗ ಪುಟ್ಟು ಸುಮ್ಮನಾಗುತ್ತಾನೆ. ಅವನಿಗೆ ಇದು ಸಾಮಾನ್ಯ ವಿಚಾರವೆಂದೇ ಭಾಸವಾಗುತ್ತದೆ. ಮುಂದಿನ ತಲೆಮಾರುಗಳಿಗೆ ಭೇದ ಭಾವದ, ಮೇಲು-ಕೀಳಿನ ಅರಿವು ಹೀಗೆ ಸಹಜ ಸಾಮಾನ್ಯವೆಂಬಂತೆ ದಾಟುತ್ತದೆ.

ಜಾತಿಯ ಅವಮಾನವನ್ನು ಪ್ರತಿರೋಧಿಸುವ ಧ್ವನಿಗಳು ಕಾದಂಬರಿಯಲ್ಲಿ ರುಕ್ಕು, ನರಪಟೆ, ಸೀತುವಿನ ಪಾತ್ರಗಳಲ್ಲಿ ಕಾಣಬಹುದು. ತಳಸಮುದಾಯದ ಸ್ತ್ರೀ ಪಾತ್ರಗಳು ಜಾತಿ ಕೀಳರಿಮೆಯನ್ನು ಶಕ್ತಿಯಾಗಿಸಿಕೊಂಡ ರೀತಿ ಪುರುಷ ಪಾತ್ರಗಳಲ್ಲಿ ಕಾಣಸಿಗುವುದಿಲ್ಲ. ಶೋಷಿತ ಹೆಣ್ಣು ತನ್ನ ಅಲ್ಪದನಿಯನ್ನಾದರೂ ಎತ್ತಲು ಇಲ್ಲಿ ಸಮರ್ಥಳೇ ಹೌದು. ''ಕತ್ತರಿಸಲಿಕ್ಕೆ ಅಡ್ಡಿಯಿಲ್ಲ, ಮುಟ್ಟಲಿಕ್ಕೆ ಮಡಿ ಅಡ್ಡಿ ಬಂತ? ಒಳ್ಳೇ ಪಾರ್ತಮ್ಮ, ಅದಕ್ಕೆ ಮಗ ಹಾಗೆ ಮಾಡಿದ'' ಎಂದು ಎಲೆ ಅಡಿಕೆ ಬಾಯಿಗೆಸೆದು ತೃಪ್ತಿಪಟ್ಟಳು. ಹಲಸಿನ ಕಾಯಿಯನ್ನು ಕತ್ತರಿಸುವವರೆಗೂ ಮಾತ್ರ ಅವಳ ಜಾತಿಯ ಮಾನ್ಯತೆ. ನಂತರ ಸೊಳೆ ಸುಲಿಯಲು ಆಕೆ ಅಸ್ಪೃಶ್ಯಳು ಈ ಭೇದ ಭಾವದ ಪ್ರಜ್ಞೆಯಿಂದ ಜಾಗೃತಳು ರುಕ್ಕು. ತೋಟಿಯನ್ನು ಹೀಯಾಳಿಸುತ್ತಿದ್ದ ಪಾರ್ವತಮ್ಮನನ್ನು ವ್ಯಂಗ್ಯ ಮಾಡುತ್ತಾಳೆ. ಪಾರ್ತಕ್ಕ ಅವಳನ್ನು ಕೆಲಸ ಬಿಟ್ಟು ಹೋಗಲು ಒತ್ತಾಯ ಪಡಿಸುವಳು. ಎದುರಾಡಿದವರು ಉಳಿಯಲಾರರು. ತಮ್ಮ ಪ್ರಜ್ಞೆಯಲ್ಲಿಯೇ ಲೋಪವಿದ್ದಾಗ್ಯೂ ಮೇಲಿನವರು ಎನಿಸಿಕೊಂಡವರೇ ಯಾವತ್ತೂ ಬಲ್ಲವರು.

ಹುಲ್ಲು ಮಾರುವ ಕೂಸ ಅವಳಿ ಮಕ್ಕಳ ತಾಯಿಯಾಗುವವಳು, ತನ್ನ ಕೆಲಸ ಬೇರಾರಿಗೂ ಹೋಗದಿರಲೆಂದು ಮುಂಜಾಗ್ರತೆಯನ್ನು ವಹಿಸುವ ಬದುಕಾಸೆಯವಳು. ಅವಳು ಆಸ್ಪತ್ರೆಯಲ್ಲಿ ಅವಳಿ ಮಕ್ಕಳಿಗೆ ಜನ್ಮವಿತ್ತು ವಿಪರೀತ ರಕ್ತ ಸ್ರಾವದಿಂದ ಸಾಯುತ್ತಾಳೆ. 'ಡಾಕ್ಟರಿಗೆ ಬೆಳಿಗ್ಗೆ ಎದ್ದು ಪಾರಾಯಣ, ಜಪ ಜೋರಂತೆ, ಹೇಳಿ ಕೇಳಿ ಇದು ಕೂಸ. ಇದನ್ನು ಮುಟ್ಟಿಯೇ ಬಿಟ್ಟಾರ ಅವರು?'. ಕಲಿತವರ ಮೌಢ್ಯದ ಪರಾಕಾಷ್ಠೆಯನ್ನು ನುಡಿದಳು ರುಕ್ಕು. ಭಾಸ್ಕರನು ತುಕ್ರಿ, ವಿವಾಹೋತ್ತರದ ಕುಮುದಿನಿಯನ್ನು ಮದುವೆಯಾಗಿ ನಗರದಲ್ಲಿ ನೆಲೆಸುತ್ತಾನೆ. ನಗರವು ಬದಲಾವಣೆಗಳನ್ನು ಜೀರ್ಣಿಸಿಕೊಂಡಷ್ಟು ಸುಲಭದಲ್ಲಿ ಗ್ರಾಮಗಳಿಗೆ ಸಾಧ್ಯವಿಲ್ಲ. ಶಿವು

ಸಹ ನಗರದಲ್ಲಿ ಸ್ವಾತಂತ್ರ್ಯದ ಮನುಷ್ಯ. ಗ್ರಾಮದಲ್ಲಾದರೆ ತಾನೇನನ್ನು ಮೀರಲಾರದವನು. ಕುಮುದಿನಿಯನ್ನು ಮನೆಗೆ ಕರೆದುಕೊಂಡು ಬಂದಾಗ ಅಟ್ಟವನ್ನು ಸೇರುವ ಪಾರ್ತಕ್ಕ ಗ್ರಾಮದಲ್ಲಿ ಭದ್ರ ಬುನಾದಿಯಾಗಿರುವ ಅಸಮಾನ ಪಟ್ಟಭದ್ರ ವ್ಯವಸ್ಥೆಯ ಪ್ರತೀಕದಂತಿದ್ದಾಳೆ. ಆದರೆ ಇದು ಅವಳಿಗೂ ಸಹ್ಯವಲ್ಲ. ತನ್ನ ಮಗ ಸೊಸೆ ಹಾಗೂ ಮೊಮ್ಮಕ್ಕಳೊಂದಿಗೆ ಬದುಕಲಿಚ್ಛಿಸುವವಳು. ಕಾಣದ ವ್ಯವಸ್ಥೆಯ ಅಪಮಾನಕ್ಕೆ ಅಂಜುವವಳು.

ಹೀಗೆ ಅಸ್ಪೃಶ್ಯರು ಕಾದಂಬರಿಯು ಸಾಂಸ್ಕೃತಿಕವಾಗಿ ಬದಲಾವಣೆಗೆ ತೆರೆದುಕೊಂಡ, ತೆರೆದುಕೊಳ್ಳಲಾರದ ಒಂದು ನೆಲದ ಗುಣವನ್ನು ಹಿಡಿದಿಡುತ್ತದೆ.

**ಆಕರ ಗ್ರಂಥ:**

1. ವೈದೇಹಿ, (2022), ಅಸ್ಪೃಶ್ಯರು, ಹೆಗ್ಗೋಡು: ಅಕ್ಷರ ಪ್ರಕಾಶನ.

**ಪರಾಮರ್ಶನ ಗ್ರಂಥಗಳು:**

1. ಕೇಶವ ಶರ್ಮ ಕೆ., (2013), ವಸಾಹತುಶಾಹಿ ಪರಿಕಲ್ಪನೆಗಳು, ಬೆಂಗಳೂರು: ದೇಸಿ ಪುಸ್ತಕ.
2. ನಾಗಭೂಷಣ್ ಓ. ಎಲ್., (2015), ವಿಮರ್ಶೆಯ ಪರಿಭಾಷೆ, ಬೆಂಗಳೂರು: ಅಭಿನವ.
3. ಶಶಿಕಲಾ ಎಚ್., (2016), ಏಕ – ಅನೇಕ, ಬೆಂಗಳೂರು: ಬೆಳಕು ಪ್ರಕಾಶನ.